3. ಪ್ರಕಟಣೆ

ವಿಧಾನಸಭಾ ಸದಸ್ಯರಾದ ಶ್ರೀ ಸಂತೋಷ್ ಎಸ್. ಲಾಡ್ ಅವರು, ವೈಯಕ್ತಿಕ ಕಾರಣದ ಹಿನ್ನೆಲೆಯಲ್ಲಿ, ದಿನಾಂಕ 13–03–2015 ರಿಂದ ಪ್ರಸಕ್ತ ನಡೆಯುತ್ತಿರುವ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೊರಿ ಪತ್ರವನ್ನು ನೀಡಿರುತ್ತಾರೆ.

ಮಾನ್ಯ ಸದಸ್ಯರು, ಸದನಕ್ಕೆ ಪ್ರಸ್ತಾಪಿತ ಅವಧಿಯಲ್ಲಿ ಗೈರು ಹಾಜರಾಗಲು ಸದನದ ಸಹಮತಿ ಇದೆ ಎಂದು ಭಾವಿಸಲಾಗಿದೆ.

ಶ್ರೀ ಸಂತೋಷ್ ಎಸ್. ಲಾಡ್ ಅವರು ದಿನಾಂಕ 13–03–2015 ರಿಂದ ಪ್ರಸಕ್ತ ಅಧಿವೇಶನದ ಸಂದರ್ಭದಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿ ನೀಡಲಾಗಿದೆ.

4. ಡಿ.ಕೆ. ರವಿ ಅವರ ನಿಗೂಢ ಸಾವಿನ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಸರ್ಕಾರದ ನಡೆವಳಿಕೆಯ ಬಗ್ಗೆ ಅವರು ಬೇಸರಗೊಂಡು ಸದನಕ್ಕೂ ಬರುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು:– ಈಗ ಅವೆಲ್ಲಾ ಸಾಕು.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದಕ್ಕೆ ಹೇಳಿ ಸಾರ್. important issues ಇದೆ. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾತನಾಡಲಿ. ಹೊರಗೆ ಹೋಗಿ ಬಜೆಟ್ ಮೇಲೆ ಟೀಕೆ ಮಾಡುತ್ತೀರಿ. ಅದಕ್ಕಿಂತಲೂ ಸದನದಲ್ಲಿ ಮಾಡಲಿ. ನಮಗೂ ಗೊತ್ತಾಗುತ್ತದೆ ಎಲ್ಲಿ ಏನಾಗಿದೆಯೆಂದು. ಹೊರಗೆ ಮಾಡಿದರೆ ಏನೂ ಗೊತ್ತಾಗುವುದಿಲ್ಲ.